ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Monday, the 29th June, 1981 / Ashada 8, 1903. S. E.

The House met in the Assembly Chamber, Vidhana Soudha, at One of the Clock.

[MR. SPEAKER (SRI K. H. RANGANATH) in the Chair.]

STARRED QUESTIONS
(to which oral Answers were given)

Statisties reg. Sandalwood Trees in the State.

37 SRI M. RAMAPPA (Kurugodu).—Will the Minister for Forest and Mines and Geology be pleased to state:—

(a) the number of sandalwood trees ripe for felling in the State (Talukwise information may be furnished);

(b) the approximate quantity of sandalwood sold with the value by the Government for the last 3 years (talukwise);

(c) approximate quantity of sandalwood smuggled during the last 3 years Talukwise;

(d) the number of smuggled cases booked with quantity during the last 3 years by the Forest Department and Police Department separately;

(e) the action taken to stop such smuggling?

SRI G. MADE GOWDA (Minister for Forest and Mines and Geology)

(a) No, systematic enumeration of sandalwood trees has been done in the State. As per the rough estimate the number of sandalwood ripe for felling is about 8,354 trees.

(b) The approximate quantity of sandalwood sold with the value by the Department during the last three years are as detailed statement Laid on the Table.

(c) Quantity of sandalwood smuggled is not known. But quantity of sandalwood detected while smuggling the last 3 years in as detailed statement Laid on the Table.

(d) The number of smuggled cases booked with quantity during the last 3 years by the Forest Department and Police Department are as detailed Laid on the Table.

(e) All efforts are being made by the Department by keeping a constant vigilance over the movement of vehicles at Forest checking gates. Regular patrolling and peramulation of Forest Areas is being done by the protective staff. Futher the Department with the cooperation of the police, has been strengthening the vigilance at the vulnerable points to ensure that no case escapes the notice of the Department and that the culprits are booked.

ಶ್ರೀ ಎಂ. ರಾಮಪ್ಪ.—ಸ್ವಾಮಿ, ಒಂದು ಗಂಧದ ಮರ ಎಷ್ಟು ತೂಕ ಬರುತ್ತದೆ ಹಾಗೂ ಎಷ್ಟು ಬೆಲೆಬಾಳಬಹುದು ಎಂಬುದನ್ನು ತಿಳಿಸಲು ಸಾಧ್ಯವೇ?

ಶ್ರೀ ಜಿ. ಮಾದೇಗೌಡ.—ಆ ಮರದ ಗಾತ್ರ ಮತ್ತು ತೂಕದ ಮೇಲೆ ಅದರ ಬೆಲೆ ಅವಲಂಬಿಸಿರುತ್ತದೆ.

ಶ್ರೀ ಎಂ. ರಾಮಪ್ಪ.—ಸ್ವಾಮಿ, ನನಗೆ ತಿಳಿದಮಟ್ಟಿಗೆ ಒಂದು ಗಂಧದ ಮರ ಸ್ವಲ್ಪ ಹೆಚ್ಚೂ ಕಡಿಮೆ ೫೦ ಸಾವಿರ ರೂಪಾಯಿಗಳವರೆಗೂ ಬೆಲೆಬಾಳುತ್ತದೆ. ಇದರ ಲೆಕ್ಕವನ್ನು ಕೊಡಿ ಎಂದು ಕೇಳಿದರೆ ಅದರ ಮಾಹಿತಿ ಇಲ್ಲವೆಂದು ತಾವು ಹೇಳುತ್ತಿದ್ದೀರಿ. ಆದರೆ ಈಗ ೧೨-೧೩ ವರ್ಷಗಳಹಿಂದೆ ಇದರ ಮಾಹಿತಿಯನ್ನು ಇಡುತ್ತಿದ್ದರು. ಈಗ ನೀವು ಏತಕ್ಕೆ ಇಡುತ್ತಿಲ್ಲ? ಒಂದು ಮರ ಸುಮಾರು ಎಷ್ಟು ವರ್ಷ ಬದುಕಿರುತ್ತದೆ?

ಶ್ರೀ ಜಿ. ಮಾದೇಗೌಡ.—ತಮ್ಮ ಪ್ರಶ್ನೆ ನನಗೆ ಅರ್ಥವಾಗಲಿಲ್ಲ, ದಯವಿಟ್ಟು ಮತ್ತೊಮ್ಮೆ ಪ್ರಶ್ನೆ ಕೇಳಬೇಕು.

ಶ್ರೀ ಎಂ. ರಾಮಪ್ಪ.—ಸ್ವಾಮಿ, ನರಿ, ಕುರಿ, ಮಂತಾದ್ದರ ಬಗ್ಗೆ ಪ್ರಶ್ನೆ ಕೇಳಿ ಎಷ್ಟಿದೆ ಎಂದರೆ ತಾವು ಲೆಕ್ಕ ಹೇಳುತ್ತೀರಿ. ಆದರೆ ಸುಮಾರು ೫೦ ಸಾವಿರ ರೂಪಾಯಿ ಬೆಲೆಬಾಳುವ ಗಂಧದ ಮರದ ಬಗ್ಗೆ ಮಾಹಿತಿ ಕೇಳಿದರೆ ತಮ್ಮಲ್ಲಿಲ್ಲವೆಂದು ಹೇಳುತ್ತಿದ್ದೀರಿ, ಅಂದರೆ ಇದರ ಅರ್ಥವಾದರೂ ಏನು?

ಶ್ರೀ ಜಿ. ಮಾದೇಗೌಡ.—ಸ್ವಾಮಿ, ನಮ್ಮದು ಗಂಧದ ನಾಡು ಎಂಬುದು ತಮಗೂ ಗೊತ್ತಿದೆ. ಈ ಗಂಧದ ಮರ ಎಲ್ಲ ಕಡೆಗಳಲ್ಲಿಯೂ ಬೆಳೆಯುತ್ತದೆ, ಕೆಲವು ಮರಗಳು ೨-೩-೫ ವರ್ಷದೊಳಗೇ ಸತ್ತು ಹೋಗುತ್ತದೆ. ಮತ್ತೆ ಕೆಲವು ಒಂದು ನೂರು ವರ್ಷಗಳವರೆಗೂ ಬದುಕಿರುವ ನಿದರ್ಶನಗಳಿವೆ. ತಮಗೆ ಇದರ ಬಗ್ಗೆ ಲೆಕ್ಕಕ್ಕೆ ಹೇಳಬೇಕೆಂದರೆ ಬಹಳ ಕಷ್ಟ. ಆದರೂ ಪ್ರತಿ ವರ್ಷ ನಾವು ಸುಮಾರು ೧೨೦೦ ಟನ್ ಗಳಷ್ಟು ಸ್ಯಾಂಡಲ್ ಮರಗಳನ್ನು ಕಡಿಮೆ ಮಾರಾಟ ಮಾಡುತ್ತಿದ್ದೇವೆ. ಒಟ್ಟಿನಲ್ಲಿ ಕಡಿಯುವುದಕ್ಕೆ ಯೋಗ್ಯವಾಗಿರತಕ್ಕ ಮರಗಳನ್ನು ಮಾತ್ರ ಕಡಿಯುತ್ತಿದ್ದೇವೆ. ದೇಶದಲ್ಲಿರುವ ಎಲ್ಲ ಗಂಧದ ಮರಗಳನ್ನೂ ಲೆಕ್ಕ ಹಾಕಬೇಕಾದ್ದು ಸರಿ. ಆದರೆ ಆ ಮಾಹಿತಿ ನನ್ನ ಹತ್ತಿರ ಇಲ್ಲ.

ಶ್ರೀ ಎಂ. ರಾಮಪ್ಪ.—ಪ್ರತಿವರ್ಷ ಎಷ್ಟು ಮರಗಳನ್ನು ಕಡಿಯುತ್ತೀರೋ ಅಷ್ಟು ಮರಗಳನ್ನು ಬೆಳೆಸಬೇಕೆಂದು ಒಂದು ನಿಯಮವಿದೆ. ಅದನ್ನು ತಾವು ಅನುಸರಿಸುತ್ತಿದ್ದೀರಾ?

ಶ್ರೀ ಜಿ. ಮಾದೇಗೌಡ.—ಮಾನ್ಯ ಅಧ್ಯಕ್ಷರೇ ನಾವು ಬೆಳೆಸತಕ್ಕಂಥ ಗಂಧದ ಮರಗಳ ಲೆಕ್ಕ ನಮ್ಮ ಹತ್ತಿರವಿರುತ್ತದೆ. ನಮ್ಮ ನಾಡು ಗಂಧದನಾಡಾಗಿರುವುದರಿಂದ ಎಲ್ಲಕಡೆಯಲ್ಲೂ ತಾನಾಗಿಯೇ ಗಂಧದ ಮರಗಳು ಹುಟ್ಟಿಕೊಳ್ಳುತ್ತವೆ. ನಾವು ಹಾಕತಕ್ಕಂಥದ್ದು ಅವಾಗಿಯೇ ಹುಟ್ಟಿಕೊಳ್ಳತಕ್ಕಂಥದ್ದರಲ್ಲಿ ಸಾಯುವುದು ಎಷ್ಟು, ಚೆನ್ನಾಗಿ ಬೆಳೆಯತಕ್ಕಂಥದ್ದು ಎಷ್ಟು ಎಂದು ಸರ್ಕಾರದವರು ಲೆಕ್ಕವಿಡಲು ಸಾಧ್ಯವಿಲ್ಲ. ಹುಟ್ಟಿದ ಮರಗಳೆಲ್ಲ ಬೆಳೆಯುತ್ತವೆಂದು ಹೇಳುವುದಕ್ಕೂ ಆಗುವುದಿಲ್ಲ.

ಶ್ರೀ ಎಂ. ರಾಮಪ್ಪ.—ನಮ್ಮ ದೇಶ ಗಂಧದಮರಗಳು ಬೆಳೆಯತಕ್ಕಂಥ ದೇಶವೆಂದು ಹೇಳಿದ ಮೇಲೆ ೮೩೫೪ ಮರಗಳೇ ನಮ್ಮ ದೇಶದಲ್ಲಿ ಬೆಳೆದಿರತಕ್ಕಂಥದು? ಸ್ವಾಮಿ ಒಂದು ಗಂಧದಮರವನ್ನು ಕಡಿಯಬೇಕಾದರೆ ಅದರ ಆಯಸ್ಸು ಸುಮಾರು ಎಷ್ಟು ವರ್ಷಗಳಾಗಿರಬೇಕು?

ಅಧ್ಯಕ್ಷರು.—ಎಷ್ಟಿಗೆ ನಮ್ಮ ನಾಡಿನಲ್ಲಿ ಒಟ್ಟು ಬೆಳೆದಿರತಕ್ಕಂಥ ಗಂಧದಮರಗಳ ಸಂಖ್ಯೆ ಎಂದು ಹೇಳಲಿಲ್ಲ, ಕಡಿಯಲಿಕ್ಕೆ ಬಂದಿರತಕ್ಕಂಥ ಮರಗಳ ಸಂಖ್ಯೆ ೮ ಸಾವಿರವೆಂದು ಮಾನ್ಯ ಸಚಿವರು ಹೇಳಿರುತ್ತಾರೆ.

ಶ್ರೀ ಆಪ್ಪಾಜಿ.—ಪ್ರತಿವರ್ಷ ಕೂಪು ಎಷ್ಟಿಗೆ ಮರಗಳನ್ನು ಕಡಿಯುವುದಕ್ಕೆ ಅಪ್ಪಣೆ ಕೊಡಿಸುತ್ತೀರಾ ಸ್ವಾಮಿ?

ಶ್ರೀ ಮಾದೇಗೌಡ.—ಸುಮಾರು ೮ ಸಾವಿರ ಮರಗಳನ್ನು ಕಡಿದದ್ದು ಈ ವರ್ಷದ ಲೆಕ್ಕ.

ಶ್ರೀ ಡಿ. ಟಿ. ರಾಮು.—ನಮ್ಮ ರಾಜ್ಯದಲ್ಲಿ ಗಂಧದ ಮರಗಳ ಕಳ್ಳಸಾಗಾಣಿಕೆ ಬಹಳ ಜಾಸ್ತಿಯಾಗುತ್ತಿರುವುದರಿಂದ ಇದನ್ನು ತಡೆಗಟ್ಟಲಿಕ್ಕೆ ಉತ್ತಮವಾದ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೀರಾ ಸ್ವಾಮಿ?

ಶ್ರೀ ಜಿ. ಮಾದೇಗೌಡ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದಹಾಗೆ ಕಳ್ಳಸಾಕಾಣಿಕೆ ಜಾಸ್ತಿಯಾಗಿರುವುದನ್ನು ಮನಗಂಡು ನಮ್ಮ ಸರ್ಕಾರದವರು ಅನೇಕ ವಿಧವಾದ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಮೊದಲಿದ್ದ ಫಾರೆಸ್ಟ್ ಆಕ್ಟ್‌ಗೆ ತಿದ್ದುಪಡಿ ತಂದಿರುತ್ತಾರೆ. ಅದರ ಪ್ರಕಾರ ಹಿಂದೆ ಕಳ್ಳತನದಲ್ಲಿ ಸಿಕ್ಕಿದಂಥವರಿಗೆ ೨ ವರ್ಷಗಳ ಕಾಲ ಜೈಲು ಶಿಕ್ಷೆ ಮತ್ತು ೫ ಸಾವಿರ ರೂಪಾಯಿಗಳ ದಂಡ ವನ್ನು ವಿಧಿಸುತ್ತಿದ್ದರು. ಈಗ ಇದನ್ನು ಜಾಸ್ತಿಮಾಡಲಾಗಿದೆ, ಗಂಧದಮರಗಳನ್ನು ಕಳ್ಳಸಾಕಾಣಿಕೆ ಮಾಡಿದವರಿಗೆ ೨೫ ಸಾವಿರ ರೂಪಾಯಿಗಳ ಜುಲ್ಮಾನೆ ಮತ್ತು ೭ ವರ್ಷಗಳ ಕಾಲ ಕಠಿಣ ಸಜೆಯನ್ನು ವಿಧಿಸತಕ್ಕಂಥ ಕಾನೂನು ಮಾಡಿರುತ್ತಾರೆ. ಮತ್ತೆ ಬಾರ್ಡರ್‌ಗಳಲ್ಲಿ ಕಳ್ಳಸಾಕಾಣಿಕೆಯನ್ನು ತಡೆಗಟ್ಟಲು ಕೇರಳ ತಮಿಳುನಾಡು ಪ್ರದೇಶಗಳಲ್ಲಿ ವಯರಲೆಸ್ ಸೆಟ್ಸ್ ಮತ್ತು ಅನೇಕ ಕಡೆ ಚೆಕ್‌ಪೋಸ್ಟ್‌ಗಳನ್ನು ಇಟ್ಟಿರುವುದರಿಂದ ದಿನೇ ದಿನೇ ಕಳ್ಳಸಾಕಾಣಿಕೆಯು ಕಡಿಮೆಯಾಗುತ್ತಿರುವುದಕ್ಕೆ ನಾವು ಸಂತೋಷವನ್ನು ವ್ಯಕ್ತಪಡಿಸಬೇಕಾಗಿರುತ್ತವೆ.

ಶ್ರೀ ಎಚ್. ವಿಶ್ವನಾಥ್.—ಮಾನ್ಯ ಸಚಿವರು ಇಲಾಖೆಯಮತಿಯಿಂದ ಬೆಳೆಸಿದಂಥ ಮರಗಳ ಲೆಕ್ಕವನ್ನು ಮಾತ್ರ ಇಟ್ಟಿದ್ದೇವೆಂದು ಹೇಳಿದರು. ಬೇರೆಯವರು ಹುಟ್ಟಿಸಿದ ಮರಗಳ ಲೆಕ್ಕವನ್ನು ಇಟ್ಟಿಲ್ಲ. ಯಾರೋ ಹುಟ್ಟಿಸಿದ ಮರಗಳನ್ನು ಯಾರು ಬೇಕಾದರೂ ಕಡಿದುಕೊಳ್ಳಬಹುದು ಎಂದು ಅರ್ಥವೆ?

ಅಧ್ಯಕ್ಷರು.—ಹುಟ್ಟಿಸಿದ ಮರಗಳು ಎಂದು ಹೇಳುವುದಕ್ಕಿಂತ ಅವಾಗಿಯೇ ಹುಟ್ಟಿದ ಮರಗಳೆಂದು ಕೇಳಿ.

ಶ್ರೀ ಎಂ. ರಾಮಪ್ಪ.—ಸುಮಾರು ಈ ವರ್ಷದಲ್ಲಿ ೮ ಸಾವಿರ ಮರಗಳನ್ನು ಕಡಿದಿರುತ್ತೇವೆಂದು ಹೇಳಿರುತ್ತಾರೆ. ಸುಮಾರು ೫ ವರ್ಷದಿಂದಲೂ ಫಾರೆಸ್ಟ್‌ನಲ್ಲಿ ಗಂಧದಮರಗಳನ್ನು ಕಡಿಯುತ್ತಿದ್ದರೆ. ಫಾರೆಸ್ಟನ್ನು ಬೆಳೆಸಲಿಕ್ಕೆ ಏನಾದರೂ ಪ್ಲಾನಿಂಗ್ ಇದೆಯೇ?

ಶ್ರೀ ಜಿ. ಮಾದೇಗೌಡ.—ಮಾನ್ಯ ಸದಸ್ಯರ ತಲೆಯೊಳಗೆ ಏನು ಇದೆಯೋ ಗೊತ್ತಾಗುತ್ತಿಲ್ಲ. ಅವರು ಹೇಳತಕ್ಕಂಥದ್ದು ಅರ್ಥಮಾಡಿಕೊಳ್ಳುವುದಕ್ಕೆ ಆಗುತ್ತಿಲ್ಲ.

ಶ್ರೀ ಎಂ. ರಾಮಪ್ಪ.—ನಮ್ಮ ತಲೆಯಲ್ಲಿ ಇದೆ. ನಿಮ್ಮ ತಲೆಯಲ್ಲಿ ಏನು ಇದೆಯೋ ಅರ್ಥವಾಗುತ್ತಿಲ್ಲ. ಒಂದು ಪ್ಲಾನಿಂಗ್ ಇರಬೇಕು. ಕಾಡನ್ನು ಕತ್ತರಿಸಿ ಬೇಕಾದರೆ, ಅಷ್ಟೇ ಕಾಡನ್ನು ಬೆಳೆಸಲು ಪ್ಲಾನಿಂಗ್ ಇರಬೇಕು. ಎಂಟು ಸಾವಿರ, ಹತ್ತು ಸಾವಿರ ಮರಗಳನ್ನು ಕಡಿಯುತ್ತೇವೆಂದು ಹೇಳಿದರೆ ಅದಕ್ಕೆ ಏನು ಅರ್ಥ?

ಶ್ರೀ ಜಿ. ಮಾದೇಗೌಡ.—ನಾನು ಹೇಳಿದ್ದು ಮಾನ್ಯ ಸದಸ್ಯರ ತಲೆಯಲ್ಲಿ ಏನು ಅಭಿಪ್ರಾಯ ವಿದೆಯೋ ಅದನ್ನು ಅರ್ಥಮಾಡಿಕೊಳ್ಳುವುದಕ್ಕಾಗುತ್ತಿಲ್ಲ.

ಅಧ್ಯಕ್ಷರು.—ತಲೆಯಲ್ಲಿ ಎಂದಂ ಹೇಳಬಾರದು, ಮನಸ್ಸಿನಲ್ಲಿ ಎಂದು ಹೇಳಬೇಕು.

ಶ್ರೀ ಜಿ. ಮಾದೇಗೌಡ.—ಮೈಸೂರು ಹತ್ತಿರವಾಗಿ ಇರುವ ಕನ್ನಡ ಭಾಷೆಗೂ ಆದವಾನಿ ಹತ್ತಿರ ಇರುವ ಕನ್ನಡ ಭಾಷೆಗೂ ಬಹಳ ವ್ಯತ್ಯಾಸವಿದೆ.

SRI QAMARUL ISLAM.—We are also not understanding what the Hon. Member is asking and what the hon. Minister is replying. It is very difficult to understand.

MR. SPEAKER.—Try to learn Kannada.

ಶ್ರೀ ಜಿ. ಮಾದೇಗೌಡ.—ಅದಕ್ಕೆ ಸ್ವಾಮಿ ಗಂಧದ ಮರಗಳನ್ನು ನಾವು ಬೆಳೆಸಿದ್ದೇ ಆಗಲಿ, ರೈತರು ಬೆಳೆಸಿದ್ದೇ ಆಗಲಿ ಅದನ್ನು ಯಾವಾಗ ಕಡಿಯಬೇಕು ಎನ್ನುವ ಬಗ್ಗೆ ನಮ್ಮ ಇಲಾಖೆಯ ಅಧಿಕಾರಿಗಳು ಪ್ರತಿ ವರ್ಷ ಸರ್ವೆ ಮಾಡುತ್ತಾರೆ. ಸರ್ವೆ ಮಾಡಿ ಯಾವ ಮರಗಳನ್ನು ಕಡಿಯುವುದಕ್ಕೆ ಬರುತ್ತದೋ ಅಂಥವುಗಳನ್ನು ಕಡಿಯುತ್ತಾರೆ. ನಾವು ಹಾಕಿದ ಮರಗಳು ಮತ್ತು ರೈತರು ಬೆಳೆಸಿದ ಮರಗಳ ಲೆಕ್ಕ ನಮ್ಮಲ್ಲಿ ಇದ್ದರೂ ತಾವಾಗಿಯೇ ಹುಟ್ಟಿದ ಮರಗಳ ಅಂಕಿಸಂಖ್ಯೆ ನಮ್ಮ ಹತ್ತಿರ ಇರುವುದಿಲ್ಲ. ಗಂಧದ ಮರದ ಕಾಡನ್ನು ಬೆಳೆಸಲು ಇಲಾಖೆಯಲ್ಲಿ ಸ್ಪಷ್ಟವಾದ ಪ್ಲಾನಿಂಗ್ ಇರುತ್ತದೆ. ನಮ್ಮ ಇಲಾಖೆಯವರು ಸ್ಪಷ್ಟವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಚೆನ್ನಾಗಿಯೇ ಕೆಲಸ ಮಾಡುತ್ತಿದ್ದಾರೆಂದು ಮಾನ್ಯ ಸದಸ್ಯರಿಗೆ ತಿಳಿಸಲು ಸಂತೋಷ ಪಡುತ್ತೇನೆ.

ಶ್ರೀ ಎಂ. ಮಾದಯ್ಯ —ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಉತ್ತರದಲ್ಲಿ ರಾಜ್ಯದಲ್ಲಿರತಕ್ಕಂಥ ಗಂಧದ ಮರಗಳ ಎಣಿಕೆಯನ್ನು ವ್ಯವಸ್ಥಿತವಾಗಿ ಮಾಡಿರುವುದಿಲ್ಲವೆಂದು ಹೇಳಿರತಕ್ಕಂಥದ್ದು ಸರಿಯಲ್ಲ. ೧೯೬೭ರಲ್ಲಿ ಇದೇ ರೀತಿ ಪ್ರಶ್ನೆಯನ್ನು ಕೇಳಿದ್ದೆ. ಎಲ್ಲ ಡಿಸ್ಟ್ರಿಕ್‌ನಲ್ಲಿರತಕ್ಕಂಥ ಮರಗಳು ಮತ್ತು ಬೆಂಗಳೂರಿನಲ್ಲಿರತಕ್ಕಂಥ ಮರಗಳನ್ನು ಎನ್ಯೂಮರೇಟ್ ಮಾಡಿರುವುದರಲ್ಲಿ ಎಷ್ಟೋ ಮರಗಳು ಬಿಟ್ಟು ಹೋಗಿರುತ್ತದೆ. ಇದನ್ನೆಲ್ಲ ಫಾರೆಸ್ಟ್ ಇಲಾಖೆಯವರು ಜವಾಬ್ದಾರಿ ವಹಿಸಿ ಲಿಸ್ಟ್ ಮಾಡಿ ಅದನ್ನು ಸರಿಯಾದ ಬಂದೋಬಸ್ತ್ ಮಾಡಿದ್ದರೆ ಕಳ್ಳತನ ಆಗುವುದಕ್ಕೆ ಅವಕಾಶವಾಗುತ್ತಿರಲಿಲ್ಲ. ದಯವಿಟ್ಟು ಈಗಲಾದರೂ ಯಾವ ಯಾವ ಜಾತಿ ಮರಗಳು ಎಷ್ಟೆಷ್ಟಿವೆ ಎನ್ನುವುದನ್ನು ಲಿಸ್ಟ್ ಮಾಡಿ ಕಳ್ಳತನವಾಗದಂತೆ ಈಗಲಾದರೂ ಮಾಡುತ್ತೀರಾ ಸ್ವಾಮಿ?

ಶ್ರೀ ಜಿ. ಮಾದೇಗೌಡ.—ಅಧ್ಯಕ್ಷರೇ ರೈತರು ಬೆಳೆಸತಕ್ಕಂಥ ಮರಗಳ ಮತ್ತು ಡಿಪಾರ್ಟ್‌ಮೆಂಟ್ ನವರು ಬೆಳೆಸತಕ್ಕಂಥ ಮರಗಳ ಅಂಕಿ ಸಂಖ್ಯೆಗಳನ್ನು ಇಟ್ಟುಕೊಂಡಿದ್ದೇವೆ. ಆವಾಗಿಯೇ ಬೆಳೆಯತಕ್ಕಂಥದ್ದು ಎಷ್ಟು ಎಂಬುದನ್ನು ಲೆಕ್ಕವಿಡುವುದಕ್ಕಾಗುವುದಿಲ್ಲ. ಪ್ರತಿವರ್ಷ ಆವಾಗಿಯೇ ಹುಟ್ಟುವುದು ಎಷ್ಟೋ ಮರಗಳಾದರೆ ಸಾಯುವುದು ಎಷ್ಟೋ ಮಂತಗಳು ಇರುತ್ತವೆ. ಪ್ರತಿವರ್ಷವೂ ಎನ್ಯೂಮರೇಟ್ ಮಾಡಬೇಕೆಂದರೆ ಅದಕ್ಕೆ ಬೇಕಾದಷ್ಟು ಹಣ ಮತ್ತು ಸಿಬ್ಬಂದಿ ಬೇಕಾಗುತ್ತದೆ.

SRI PRABHAKAR TELKAR.—Sir, I can understand the difficulty mentioned by the Hon. Minister. But at least to check smuggling can not the enumeration of the sandlewood trees, which are on the border of Kerala and Tamil Nadu States, be done by the Government It will not require much staff. Will the Government do that enumeration at least now?

ಶ್ರೀ ಜಿ. ಮಾದೇಗೌಡ.—ಮಾನ್ಯ ಅಧ್ಯಕ್ಷರೇ ನಾವು ಗಂಧದಮರಗಳ ಕಳ್ಳಸಾಗಾಣಿಕೆಯನ್ನು ತಡೆಗಟ್ಟುವ ಸಲುವಾಗಿಯೇ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಕೇರಳ, ತಮಿಳು ನಾಡು ಬಾರ್ಡರ್ ಏರಿಯಾ ಮತ್ತು ಶಿವಮೊಗ್ಗ ಬಾರ್ಡರ್, ಧಾರವಾಡ ಬೆಳಗಾಮ್ ಈ ಭಾಗಗಳಲ್ಲಿ ವಯರ್‌ಲೆಸ್ ಕಮ್ಯುನಿಕೇಷನ್ ಇಟ್ಟುಕೊಂಡಿರುತ್ತೇವೆ. ಅಲ್ಲದೆ ಈ ಭಾಗಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ಇಟ್ಟು ಸ್ಮಗಲಿಂಗ್ ಆಗುವುದನ್ನು ತಡೆಯುವುದಕ್ಕೆ ತೀವ್ರ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆಂದು ನಾನು ಮೊದಲೇ ಉತ್ತರಕೊಟ್ಟಿರುತ್ತೇನೆ.

ಶ್ರೀ ಮಲ್ಲಾರಿಗೌಡ ಪಾಟೀಲ್.—ಗಂಧದ ಎಣ್ಣೆಯ ಗುಣ ಮಟ್ಟವು ಕಡಿಮೆಯಾಗಿರುವುದರಿಂದ ಇದರ ಬೇಡಿಕೆ ಕಡಿಮೆಯಾಗುತ್ತದೆ ಎಂದು ಪತ್ರಿಕೆಗಳನ್ನು ಬಂದಿರುವುದರಿಂದ ಇದರ ಗುಣಮಟ್ಟವನ್ನು ಹೆಚ್ಚಿಸಲಿಕ್ಕೆ ಸರ್ಕಾರದವರು ಪ್ರಯತ್ನ ಪಡುತ್ತೀರಾ ಎಂದು ಕೇಳುತ್ತೇನೆ.

MR. SPEAKER.—That is a different question.

ಶ್ರೀ ಎಂ. ಗಂಗಣ್ಣ.—ಮಾನ್ಯ ಅಧ್ಯಕ್ಷರೇ ಇಲ್ಲಿಯವರೆಗೆ ಕಳ್ಳ ಸಾಗಾಣಿಕೆಯಾಗಿರುವ ಗಂಧದಮರ ಗಳ ಪ್ರಮಾಣವೆಷ್ಟು ಮತ್ತು ಆದರೆ ಕಮ್ಮತ್ತು ಏನು ಎನ್ನುವುದನ್ನು ತಿಳಿಸುತ್ತೀರಾ ಸ್ವಾಮಿ ?

MR. SPEAKER.—That does not arise out of this question.

ಶ್ರೀ ಎಂ. ರಾಮಪ್ಪ.—ನನ್ನ ಅಭಿಪ್ರಾಯ ಇಷ್ಟೇ. ನಮ್ಮ ಅರಣ್ಯವನ್ನು ರಕ್ಷಿಸಬೇಕಾದರೆ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ. ಇಷ್ಟೇ ಕಡಿಯಬೇಕೆಂದು ಕಾರ್ಯಕ್ರಮ ಇದೆ. ಅದೇ ರೀತಿ ವಿಷ್ಟು ಮರಗಳು ಇವೆ ಎಂಬ ಬಗ್ಗೆ ನಿಖರವಾಗಿ ಲೆಕ್ಕ ಹಾಕಿದ್ದೀರಾ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು.—ಸಿಸ್ಟಮ್ಯಾಟಿಕ್ಕಾಗಿ ಮಾಡಿಲ್ಲ. ಅಂದಾಜು ಪ್ರಕಾರ ಮಾಡಿವ್ವಾರೆ. ಆ ನಾಮಿತ ಮರ ಗಳೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇನ್ನೇನಾದರೂ ವಿಷಯ ಕೇಳುವುದಿದ್ದರೆ ಮಾನ್ಯ ಮಂತ್ರಿಗಳನ್ನು ಮಕ್ತಾ ಭೇಟಿ ಮಾಡಿ ಚರ್ಚೆ ಮಾಡಿ.

ಶ್ರೀ ಎಂ. ರಾಮಪ್ಪ.—ಆದಾಗದೇ ಬೆಳೆಯತಕ್ಕಂತಹ ಮರಗಳನ್ನು ಲೆಕ್ಕ ಇಟ್ಟಿಲ್ಲ ಎಂದರೆ, ಅವು ಗಳನ್ನೆನಾದರೂ ಕಳ್ಳ ಸಾಗಾಣಿಕೆ ಮಾಡುವುದಕ್ಕೆ ಇಟ್ಟಿದ್ದೀರಾ? ಲೆಕ್ಕಕ್ಕೆ ಯಾವಾಗ ಸಿಗಲಿಲ್ಲ ಎಂದ ಮೇಲೆ ಅವುಗಳನ್ನು ಕಳ್ಳತನ ಮಾಡುವುದಕ್ಕೆ ಅವಕಾಶವಾಗುತ್ತದೆ ಎನ್ನುವ ಅಭಿಪ್ರಾಯ ಇದೆ.

ಶ್ರೀ ಜೆ. ಪೂವೇಗೌಡ.—ಇಲ್ಲಿಯವರೆಗೆ ನಮ್ಮ ಅಧಿಕಾರಿಗಳು ಕಳ್ಳತನ ಮಾಡುವುದಕ್ಕೆ ಜೋಗಿರ ತಕ್ಕಂತಹ ನಿದರ್ಶನಗಳು ಸರ್ಕಾರದ ಗಮನಕ್ಕೆ ಬಂದಿಲ್ಲ. ಬಾಯಿಲೆ ಹಿಡಿದಿರತಕ್ಕ, ವಯಸ್ಸು ಆಗಿರ ತಕ್ಕಂತಹ ಮರಗಳನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಂಡು ಸುಮಾರು ೧,೬೦೦ ಟನ್ ಮರಗಳನ್ನು ಕಡಿಯಬೇಕೆಂದ ಒಂದು ಲೆಕ ಮನ್ನು ಇಟ್ಟುಕೊಂಡು ಅವುಗಳನ್ನು ಕಡಿಯುತ್ತಿದ್ದೇವೆ.

Mavinsoor Tank in Chitapur Constituency

123. SRI PRABHAKAR TELKAR (Chittapur).—Will the Minister for Transport and Minor Irrigation be pleased to state.—

(a) whether "Mavinsoor Tank" in Chittapur Constituency has been investigated;

(b) if so, whether there is any proposal so take up this work immediately;

(c) whether the Government is aware that the Mavinsoor Tank will irrigate the lands mostly belonging to Lambanis S. C. & S. T. people of this area?

SRI M. M. J. SADYOJATHA (Minister for Transport and Minor Irrigation) –

(a) No

(b) Does not arise.

(c) This may be known only after investigation.

ಶ್ರೀ ಪ್ರಭಾಕರ್ ತೇಲ್ಕರ್.—ಅಧ್ಯಕ್ಷರೇ, ಈ "ಮಾವಿನಸೂರ್ ಕೆರೆ" ಬಗ್ಗೆ ನಾನು ೧೯೭೨ನೇ ಇಸವಿಯಿಂದಲೂ ಕೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದೇನೆ. ಡಿ.ಪಿ.ಸಿ. ಮೀಟಿಂಗ್‌ನಲ್ಲಿ ಇದರ ಪ್ರಶ್ನೆ ಉದ್ಭವವಾಗಿದೆ. ತಾಲ್ಲೂಕು ರಿಲೀಫ್ ಕಮಿಟಿಯಲ್ಲಿ ಈ ಪ್ರಶ್ನೆ ಬಂದಿದೆ. ಏಳಂಟು ವರ್ಷಗಳಿಂದ "ಮಾವಿನಸೂರ್ ಕೆರೆ" ಬಗ್ಗೆ ಕೇಳುತ್ತಿದ್ದೇನೆ. ಇನ್ನೂ ಇನ್ವೆಸ್ಟಿಗೇಷನ್ ಆಗಿಲ್ಲ ಎಂದು ಹೇಳಿದರೆ ಹೇಗೆ? Particularly this will help Lambanis, SCs, STs who have got lands which come under this Tank. It is because the weaker